# ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:-* ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಬಳ್ಳಾರಿ ಜಿಲ್ಲಾ ಪಂಚಾಯತ್‌ಗೆ ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಬಳಸದೇ ಹಣ ದುರುಪಯೋಗಪಡಿಸಿಕೊಂಡಿರುವ ಅಧಿಕಾರಿ ನೌಕರರ ವಿರುದ್ದ ಇಲಾಖೆ ವಿಚಾರಣೆ ದಂಡನೆ ವಿಧಿಸುವ ಬಗ್ಗೆ- ಆದೇಶ.

*ಓದಲಾಗಿದೆ:*

1. ಕಾರ್ಯದರ್ಶಿ, ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರ ಪತ್ರ ಸಂಖ್ಯೆ:ಹೈ.ಕ.ಪ್ರ.ಅ.ಮಂ-ಕ/ತಾಶಾ/ಸಿಆರ್-1/2014-15/1310, ದಿ:03.2.2015
2. ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 20 ಇಎನ್‌ಕ್ಯೂ15, ದಿ: 15.4.2015
3. ಅಪಾದಿತರ ವಿವರಣೆ ದಿನಾಂಕ:
   1. ಶ್ರೀ ಡಿ.ಟಿ.ಹನುಮಂತಪ್ಪ, ಅಂದಿನ ಕಾ.ಇಂ- ದಿ:10.6.2015.
   2. ಶ್ರೀ ಸಿ.ತಿಮ್ಮಪ್ಪ, ಅಂದಿನ ಕಾ.ಇಂ ದಿ:15.6.2015.
   3. ಶ್ರೀ ಎನ್.ಮುತ್ತಯ್ಯ, ಅಂದಿನ ಸ.ಕಾ.ಇಂ, ದಿ: 11.6.2015.
   4. ಶ್ರೀ ಡಿ.ವೆಂಕಟರಮಣ, ಅಂದಿನ ಸ,ಕಾ.ಇಂ, ದಿ.1.10.16.
   5. ಶ್ರೀ ವಿಜಯಭಾಸ್ಕರ್, ಅಂದಿನ ಸ.ಇಂ, ದಿ:2.7.2015.
   6. ಶ್ರೀ ಡಿ.ಟಿ.ಸುರೇಶರೆಡ್ಡಿ, ಅಂದಿನ ಸ.ಇಂ, ದಿ:20.8.2015
   7. ಶ್ರೀ ಪಿ.ಬಸವರಾಜ್, ಅಂದಿನ ಸ.ಇಂ, 7.10.2015.
   8. ಶ್ರೀ ಮಹಾಂತೇಶಗೌಡ ಅಂದಿನ ಕಿ.ಇಂ - ದಿನಾಂಕ:11.6.2015.
   9. ಶ್ರೀ ರಾಜರೆಡ್ಡಿ, ಅಂದಿನ ಕಿ.ಇಂ, ದಿನಾಂಕ:19.6.2015.
   10. ಶ್ರೀ ಬಿ.ಅಪ್ಪೇರಾವ್, ಅಂದಿನ ಕಿ.ಇಂ, ದಿ:8.10.2015
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 20 ಇಎನ್‌ಕ್ಯೂ 2015, ದಿನಾಂಕ: 10.12.2015.
5. ವಿಚಾರಣಾಧಿಕಾರಿಗಳ ವರದಿ ದಿನಾಂಕ: 11.7.2016
6. ಎರಡನೇ ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 20 ಇಎನ್‌ಕ್ಯೂ 15, ದಿನಾಂಕ: ಗ್ರಾಅಪ 20 ಇಎನ್‌ಕ್ಯೂ 2015, ದಿನಾಂಕ:19.8.2016.
7. ಎರಡನೇ ಕಾರಣ ಕೇಳುವ ನೋಟಿಸ್‌ಗೆ ವಿವರಣೆ
   1. ಬಿ.ಅಪ್ಪೇರಾಯ-20.2.2017.
   2. ಮಹಾಂತೇಶ ಗೌಡ-03.9.2016
8. ಸರ್ಕಾರದ ಆದೇಶ ಸಂ: ಲೋಇ 294 ಸೇಇವಿ 2015 ದಿನಾಂಕ 25.4.2017.

## ಪ್ರಸ್ತಾವನೆ:-

ಕಾರ್ಯದರ್ಶಿ, ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರು ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:03.2.2015ರ ಪತ್ರದೊಂದಿಗೆ ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ದಿ ಮಂಡಳಿಯಿಂದ ಬಳ್ಳಾರಿ ಜಿಲ್ಲಾ ಪಂಚಾಯತ್‌ಗೆ ಬಿಡುಗಡೆಯಾದ ಅನುದಾನದಲ್ಲಿ ಅನುಷ್ಠಾನಗೊಳಿಸಬೇಕಾಗಿದ್ದ ಕಾಮಗಾರಿಗಳ ಪೈಕಿ 7 ವಿವಿಧ ವರ್ಗದ ಕಾಮಗಾರಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದೆ ಹಣ ದುರ್ಬಳಕೆ ಮಾಡಿಕೊಂಡು ತೀವ್ರತರದ ಕರ್ತವ್ಯಲೋಪವೆಸಗಿರುವ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ದ ಶಿಸ್ತುಕ್ರಮ ಜರುಗಿಸಲು ಪ್ರಸ್ತಾವಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು :-

1. ಶ್ರೀ ಡಿ.ಟಿ.ಹನುಮಂತಪ್ಪ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂ.ರಾ. ಇಂ. ವಿಭಾಗ, ಬಳ್ಳಾರಿ.
2. ಶ್ರೀ ಸಿ.ತಿಮ್ಮಪ್ಪ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂ.ರಾ. ಇಂ. ವಿಭಾಗ, ಬಳ್ಳಾರಿ.
3. ಶ್ರೀ ಎನ್.ಮುತ್ತಯ್ಯ, ಅಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ.

4. ಶ್ರೀ ಡಿ.ವೆಂಕಟರಮಣ, ಅಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ.
5. ಶ್ರೀ ವಿಜಯಭಾಸ್ಕರ್, ಅಂದಿನ ಸ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ.
6. ಶ್ರೀ ಡಿ.ಟಿ.ಸುರೇಶರೆಡ್ಡಿ, ಅಂದಿನ ಸ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ.
7. ಶ್ರೀ ಪಿ.ಬಸವರಾಜ್, ಅಂದಿನ ಸ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ.
8. ಶ್ರೀ ಮಹಾಂತೇಶಗೌಡ ಅಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ.
9. ಶ್ರೀ ರಾಜರೆಡ್ಡಿ, ಅಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ.
10. ಶ್ರೀ ಬಿ.ಅಪ್ಪೇರಾವ್, ಅಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ.
11. ಎಲ್.ರಾಘವರೆಡ್ಡಿ, ಅಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ

ಮೇಲ್ಕಂಡ ಅಧಿಕಾರಿ/ನೌಕರರ ವಿರುದ್ಧ ಗಂಭೀರ ಸ್ವರೂಪದ ಆರೋಪಗಳಿದ್ದುದರಿಂದ ಮೇಲೆ ಓದಲಾದ ಅಪಾದಿತರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ಮತ್ತು 11ಎ ರನ್ವಯ ಇಲಾಖೆ ವಿಚಾರಣೆ ನಡೆಸಲು ತೀರ್ಮಾನಿಸಿ ಕ್ರಮ ಸಂ: 1ರಿಂದ 10ರಲ್ಲಿನ ಆಪಾದಿತರಿಗೆ ದೋಷಾರೋಪಣಾ ಪಟ್ಟಿಯನ್ನು ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:15.4.2015 ರ ಕಾರಣ ಕೇಳುವ ನೋಟಿಸ್‌ನೊಂದಿಗೆ ಜಾರಿ ಮಾಡಲಾಗಿತ್ತು. ಮೇಲಿನ ಕ್ರಮ ಸಂಖ್ಯೆ(11)ರಲ್ಲಿರುವ ಶ್ರೀ ಎಲ್.ರಾಘವರೆಡ್ಡಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸೇವೆಯಿಂದ ನಿವೃತ್ತಿ ಹೊಂದಿದ್ದು, ಘಟನೆ ನಡೆದು ನಾಲ್ಕು ವಷಗಳ ಅವಧಿ ಮೀರಿದ್ದು ಕ.ನಾ.ಸೇ ನಿಯಮ 214 ರಡಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಅವಕಾಶ ಇಲ್ಲದಿರುವುದನ್ನು ಗಮನಿಸಿ, ಸದರಿಯವರಿಂದ ಉಂಟಾಗಿರುವ ಆರ್ಥಿಕ ನಷ್ಟವನ್ನು ಸಿವಿಲ್ ದಾವೆ ಹೂಡಿ ವಸೂಲಿ ಮಾಡಲು ಕಾರ್ಯದರ್ಶಿ, ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರಿಗೆ ಪತ್ರ ಸಂಖ್ಯೆ: ಗ್ರಾಅಪ 20 ಇಎನ್‌ಕ್ಯೂ 2015, ದಿನಾಂಕ: 29.4.2015 ರ ಪತ್ರದಲ್ಲಿ ನಿರ್ದೇಶನ ನೀಡಲಾಗಿದೆ.

ಸರ್ಕಾರದ ಕಾರಣ ಕೇಳುವ ನೋಟಿಸ್‌ಗೆ ಪ್ರತಿಯಾಗಿ ಎಲ್ಲಾ ಅಪಾದಿತರು ಮೇಲೆ ಓದಲಾದ ಕ್ರಮಾಂಕ (3) ರಲ್ಲಿನ ದಿನಾಂಕಗಳಲ್ಲಿ ಲಿಖಿತ ಸಮಜಾಯಿಷಿಗಳನ್ನು ಸಲ್ಲಿಸಿ, ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿ, ಉದ್ದೇಶಿಸಿರುವ ಶಿಸ್ತುಕ್ರಮವನ್ನು ಕೈ ಬಿಡಬೇಕೆಂದು ಕೋರಿದ್ದರು. ಆರೋಪಿತರು ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿದ್ದರಿಂದ ಆರೋಪಗಳ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಎಲ್ಲಾ 10 ಮಂದಿ ಅಧಿಕಾರಿ/ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 13 ರನ್ವಯ ಜಂಟಿ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎ.ಎ.ಹಲಗೇರಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮೇಲೆ ಓದಲಾದ ಕ್ರಮಾಂಕ (4) ರ ಆದೇಶದಲ್ಲಿ ನೇಮಕ ಮಾಡಲಾಗಿತ್ತು.

ಅದರಂತೆ ವಿಚಾರಣಾಧಿಕಾರಿಗಳು ಆಪಾದಿತರ ಮೇಲಿನ ಆರೋಪಗಳ ಬಗ್ಗೆ ವಿವರವಾಗಿ ಇಲಾಖಾ ವಿಚಾರಣೆಯನ್ನು ನಡೆಸಿ ಮೇಲೆ ಓದಲಾದ ಕ್ರಮಾಂಕ (5) ರ ದಿನಾಂಕ: 11.7.2016 ರಂದು ಸರ್ಕಾರಕ್ಕೆ ವಿಚಾರಣೆ ವರದಿ ಸಲ್ಲಿಸಿದ್ದು ಎಲ್ಲಾ ಆರೋಪಿತರ ವಿರುದ್ಧದ ಆರೋಪಗಳು ಸಾಭೀತಾಗಿರುವುದಿಲ್ಲವೆಂದು ವಿಚಾರಣಾಧಿಕಾರಿಯವರು ನಿರ್ಣಯಿಸಿರುತ್ತಾರೆ. ಸರ್ಕಾರವು ವಿಚಾರಣಾವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿದ್ದು, ಪ್ರಕರಣದಲ್ಲಿ ಒಳಗೊಂಡಿರುವ 7 ಕಾಮಗಾರಿಗಳ ಪೈಕಿ ಈ ಕೆಳಕಂಡ ಎರಡು ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳ ನಿರ್ಣಯವನ್ನು ಒಪ್ಪದೇ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957 ರ ನಿಯಮ 11ಎ ರ ಅನುಸಾರ ಈ ಕೆಳಕಂಡ ಕಾರಣಗಳಿಗಾಗಿ ಪುನರ್ ಪರಿಶೀಲಿಸಲು ತಿರ್ಮಾನಿಸಿರುತ್ತದೆ :-

1. <u>ಬಳ್ಳಾರಿ ತಾಲ್ಲೂಕಿನ ಶಂಕರಬಂಡೆ ಗ್ರಾಮದ ಕುರುಬರ ಓಣಿಯಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ :-</u> ಈ ಕಾಮಗಾರಿಯು 2.00 ಲಕ್ಷ ರೂ.ಗಳಿಗೆ ಅನುಮೋದನೆಯಾಗಿದ್ದು ಸ್ಥಳ ಪರಿಶೀಲನೆ ಸಂದರ್ಭದಲ್ಲಿ 58,515/- ರೂ.ಗಳ ವೆಚ್ಚವಾಗಿದೆಯೆಂದು, ಕಾಮಗಾರಿಯನ್ನು ಮಂಜೂರಾದ ಅಂದಾಜಿನಂತೆ ನಿರ್ಮಿಸದೇ ತಳಪಾಯಕ್ಕೆ ಹೆಚ್ಚಿನ ವೆಚ್ಚ ಮಾಡಿರುವುದರಿಂದ ಕಟ್ಟಡದ ಅಳತೆಯನ್ನು ಕಡಿಮೆ ಮಾಡಿದ್ದು ಸ್ಥಳ ಬದಲಾವಣೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಮೌಖಿಕ ಆದೇಶ ಪಡೆದಿರುವುದಾಗಿ ಸ್ಥಳ ಪರಿಶೀಲನೆ ಸಂದರ್ಭದಲ್ಲಿ ತಿಳಿಸಿರುತ್ತಾರೆ. ಒಟ್ಟಾರೆ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ಕಾಮಗಾರಿ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಸಾಕ್ಷಿಯ ಹೇಳಿಕೆ ಮತ್ತು ಪ್ರದರ್ಶಿತ ದಾಖಲೆ ಪಿ-8 ಇವುಗಳು ಅಪಾದಿತರ ದುರ್ನಡತೆ ಎಸಗಿರುತ್ತಾರೆಂಬುದನ್ನು ಸ್ಪಷ್ಟಪಡಿಸುವುದಿಲ್ಲವೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಆದರೆ, ಈ ಕಾಮಗಾರಿಗೆ ಸಂಬಂಧಿಸಿದಂತೆ ಸಾಕ್ಷಿದಾರರಾದ ಶ್ರೀ ರುದ್ರಯ್ಯ ಇವರು ತಮ್ಮ ಹೇಳಿಕೆಯಲ್ಲಿ ಪ್ರದರ್ಶಿತ ದಾಖಲೆ ಪಿ-8 ರನ್ವಯ ವರದಿ ಸಲ್ಲಿಸಿ ಅದರಲ್ಲಿ ಕಾಮಗಾರಿ ಅಪೂರ್ಣವಾಗಿರುವುದನ್ನು ಸ್ಪಷ್ಟಪಡಿಸಿರುತ್ತಾರೆ. ವಿಚಾರಣಾಧಿಕಾರಿಗಳು ಈ ಅಂಶವನ್ನು ಸ್ಪಷ್ಟವಾಗಿ ಪರಿಗಣಿಸದೇ ಆರೋಪ ಸಾಭೀತಾಗಿರುವುದಿಲ್ಲವೆಂಬ ನಿರ್ಣಯವನ್ನು ಸರ್ಕಾರವು ಒಪ್ಪಿರುವುದಿಲ್ಲ.
2. <u>ಬಳ್ಳಾರಿ ತಾಲ್ಲೂಕಿನ ಸೋಮಲಾಪುರ ಗ್ರಾಮದ ಚೆಕ್‌ಡ್ಯಾ ನಿರ್ಮಾಣ ಕಾಮಗಾರಿ :-</u> ಈ ಕಾಮಗಾರಿಯನ್ನು ಎರಡು ಹೊಲದ ಮಧ್ಯೆ ಕಿರುನಾಲದಲ್ಲಿ ನಿರ್ಮಿಸಲಾಗಿದ್ದು, ಊರ ಹತ್ತಿರ ಯಾವುದೇ ದೊಡ್ಡ ಹಳ್ಳ ಇಲ್ಲದೇ ಇರುವ ಪ್ರಯುಕ್ತ ಈ ರೀತಿ ನಿರ್ಮಿಸಿರುವುದಾಗಿ ಸ್ಥಳ ಪರಿಶೀಲನೆ ನಡೆಸಿರುವ ಸಾಕ್ಷಿದಾರರು ವಿಚಾರಣಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ. ಅಲ್ಲದೆ, ಅ ಸಂದರ್ಭದಲ್ಲಿ ಹಳ್ಳಿಯ ಜನರು ಸಹ ಹಾಜರಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಮಂಜೂರಾದ ಅಂದಾಜಿನ ಅನುಸಾರ 45 ಮೀಟರ ಉದ್ದದ ಚೆಕ್ ಡ್ಯಾಂ ನಿರ್ಮಿಸಬೇಕಾಗಿದ್ದು ಅದನ್ನು ಎರಡು ತುಂಡುಗಳನ್ನಾಗಿ ಮಾಡಿ ಒಂದು ಭಾಗ 36 ಮೀಟರ್ ಮತ್ತು ಇನ್ನೊಂದು ಭಾಗ 9 ಮೀಟರ್ ನಿರ್ಮಿಸಿರುವ ಬಗ್ಗೆ ವರದಿಯಲ್ಲಿ ದಾಖಲಿಸಲಾಗಿದೆ. ಈ ಅಂಶವು ಪ್ರದರ್ಶಿತ ದಾಖಲೆ ಪಿ-17 ರಲ್ಲಿ ಸ್ಪಷ್ಟವಾಗಿದ್ದರೂ ಸಹ ಬೇರೆ ಬೇರೆ ಎರಡು ಭಾಗಗಳಲ್ಲಿ ಕಾಮಗಾರಿ ನಿರ್ವಹಿಸಲು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ಲೋಪವೆಸಗಿರುವುದು ಸ್ಪಷ್ಟ ವಿರುತ್ತದೆ.

ಮೇಲೆ ತಿಳಿಸಿರುವ ಎರಡು ಕಾಮಗಾರಿಗಳ ಅನುಷ್ಠಾನದಲ್ಲಿ ತೀವ್ರತರದ ಲೋಪಗಳನ್ನು ಎಸಗಿರುವ ಆರೋಪಗಳು ಲಭ್ಯವಿರುವ ದಾಖಲೆಗಳು ಹಾಗೂ ಸಾಕ್ಷಿ ಹೇಳಿಕೆಗಳಿಂದ ಸಾಭೀತಾಗಿದ್ದರಿಂದ ಸದರಿ ಕಾಮಗಾರಿಗಳನ್ನು ನಿರ್ವಹಿಸಿದ ಈ ಕೆಳಕಂಡ ನಾಲ್ಕು ಮಂದಿ ಅಧಿಕಾರಿ/ನೌಕರರಿಗೆ ಎರಡನೇ ಕಾರಣ ಕೇಳುವ ನೋಟಿಸ್‌ನ್ನು ನೊಂದಣಿ ಅಂಚೆ ಮೂಲಕ ಮೇಲೆ ಓದಲಾದ ಕ್ರಮಾಂಕ (5) ರ ದಿನಾಂಕ:19.8.2016 ರಂದು ಜಾರಿ ಮಾಡಲಾಗಿರುತ್ತದೆ :-

1. ಶ್ರೀ ತಿಮ್ಮಪ್ಪ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
2. ಡಿ.ವೆಂಕಟರಮಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಐತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬಳ್ಳಾರಿ.
3. ಪಿ.ಅಪ್ಪೇರಾವ್, ಹಿಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
4. ಶ್ರೀ ಮಹಾಂತೇಶಗೌಡ, ಹಿಂದಿನ ಸಹಾಯಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬಳ್ಳಾರಿ.

ಉಳಿದ 6 ಅಧಿಕಾರಿ/ನೌಕರರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಪುನರ್ ಪರಿಶೀಲನೆ ನಡೆಸಿರುವುದಿಲ್ಲ.

ಜಾರಿ ಮಾಡಲಾದ ಎರಡನೇ ಕಾರಣ ಕೇಳುವ ನೋಟಿಸ್‌ಗೆ ಪ್ರತಿಯಾಗಿ ಶ್ರೀ ಪಿ ಅಪ್ಪೇರಾವ್ ಮತ್ತು ಶ್ರೀ ಮಹಾಂತೇಶಗೌಡ, ಇವರುಗಳು ಮೇಲೆ ಓದಲಾದ ಕ್ರಮಾಂಕ (7) ರಲ್ಲಿ ವಿವರಣೆಯನ್ನು ಸಲ್ಲಿಸಿ, ವಿಚಾರಣಾ ವರದಿಯನ್ನು ಅಂಗೀಕರಿಸಿ, ಆರೋಪ ಮುಕ್ತಗೊಳಿಸುವಂತೆ ಕೋರಿರುತ್ತಾರೆ. ಉಳಿದ ಇಬ್ಬರು ಆರೋಪಿತರ ಅಧಿಕಾರಿಗಳು ಎರಡನೇ ಕಾರಣ ಕೇಳುವ ನೋಟಿಸ್‌ನ್ನು ಸ್ವೀಕರಿಸಿದ್ದು, ನಿಗಧಿತ ಅವಧಿಯಲ್ಲಿ ತಮ್ಮ ವಿವರಣೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ವಿವರಣೆ ಸಲ್ಲಿಸದಿರುವ ಇಬ್ಬರು ಅಪಾದಿತರಾದ ಶ್ರೀ ತಿಮ್ಮಪ್ಪ, ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಮತ್ತು ಶ್ರೀ ಡಿ.ವೆಂಕಟರಮಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ವಿವರಣೆ ಏನೂ ಇಲ್ಲವೆಂದು ಪರಿಗಣಿಸಲಾಗಿದೆ.

ಆರೋಪಗಳು ಸಾಭೀತಾಗಿರುತ್ತವೆಯೆಂದು ಪರಿಶೀಲಿಸಲಾದ ಕಾಮಗಾರಿಗಳ ಪೈಕಿ **ಬಳ್ಳಾರಿ ತಾಲ್ಲೂಕಿನ ಸೋಮಲಾಪುರ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಯನ್ನು** ಶ್ರೀ ಅಪ್ಪೇರಾವ್, ಹಿಂದಿನ ಸಹಾಯಕ ಇಂಜಿನಿಯರ್ ಮತ್ತು ಶ್ರೀ ಡಿ.ವೆಂಕಟರಮಣ, ಸ.ಕಾ.ಇಂ ಇವರುಗಳ ಉಸ್ತುವಾರಿಯಲ್ಲಿ ಅನುಷ್ಠಾನಗೊಳಿಸಿದ್ದು, ಆರೋಪವೇನೆಂದರೆ 2008-09 ನೇ ಸಾಲಿನಲ್ಲಿ ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾದ ಅನುದಾನ ರೂ.2.50 ಲಕ್ಷ ಅನುದಾನದಲ್ಲಿ ಕೈಗೊಳ್ಳಲಾದ ಬಳ್ಳಾರಿ ತಾಲ್ಲೂಕಿನ ಸೋಮಲಾಪುರ ಗ್ರಾಮದಲ್ಲಿ ನಿರ್ಮಾಣ ಮಾಡಿರುವ ಚೆಕ್ ಡ್ಯಾಂ ಕಾಮಗಾರಿಯನ್ನು ಮಂಜೂರಾದ ಅಂದಾಜಿನಂತೆ ಮಾಡಿರುವುದಿಲ್ಲ. ಸದರಿ ಕಾಮಗಾರಿಯನ್ನು ಶ್ರೀ ವಜೀರಪ್ಪ ತಂದೆ ಹನುಮಪ್ಪನವರ ಬದುವಿಗೆ ನಿರ್ಮಾಣ ಮಾಡಲಾಗಿದ್ದು, ಮಂಜೂರಾದ ಅಂದಾಜಿನಂತೆ ಅನುಷ್ಠಾನ ಮಾಡದಿರುವುದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವ ಆರೋಪ ಮಾಡಲಾಗಿದೆ. ಇದಕ್ಕೆ ಪ್ರತಿಯಾಗಿ ಶ್ರೀ ಅಪ್ಪೇರಾವ, ಸಹಾಯಕ ಇಂಜಿನಿಯರ್ ಇವರು ಸಲ್ಲಿಸಿರುವ ವಿವರಣೆ ಸಲ್ಲಿಸಿ, ಶ್ರೀ ಶಿವಲಿಂಗಯ್ಯ ಇವರು ಕಾಮಗಾರಿ ಪರಿಶೀಲನೆಯನ್ನು ದಿನಾಂಕ:25.3.2010 ರಂದು ಕೈಗೊಂಡಿದ್ದು, ಕಾಮಗಾರಿಯನ್ನು ಅಂದಾಜು ಪತ್ರಿಕೆಯನುಸಾರ ಅನುಷ್ಠಾನಗೊಳಿಸಿರುವ ಬಗ್ಗೆ ದೃಢೀಕರಿಸಿರುತ್ತಾರೆಂದು, ಸದರಿ ಕಾಮಗಾರಿಯನ್ನು ಊರಿನ ಹತ್ತಿರ ಯಾವುದೇ ದೊಡ್ಡ ಹಳ್ಳ ಇಲ್ಲದೇ ಇರುವುದರಿಂದ ಹೊಲದ ಮಧ್ಯದ ಕಿರುನಾಲೆಗೆ ಚೆಕ್ ಡ್ಯಾಂ ನಿರ್ಮಿಸಲಾಗಿದ್ದು, ಅಂದಾಜು ಪಟ್ಟಿಯನುಸಾರ 45 ಮೀಟರ್ ಚೆಕ್ ಡ್ಯಾಂ ನಿರ್ಮಾಣ ಮಾಡಬೇಕಾಗಿದ್ದು, ಸ್ಥಳದ ಅಭಾವದಿಂದ 36 ಮೀಟರ್ ನಿರ್ಮಿಸಲಾಗಿದ್ದು, ಉಳಿದ 9 ಮೀಟರ್ ಅನ್ನು ಮುಂದೆ ಅದೆ ನಾಲೆಗೆ ನಿರ್ಮಾಣ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

ಅದರೆ ಉಳಿದ 9 ಮೀಟರ್ ಅನ್ನು ಬೇರೆಡೆ ನಿರ್ಮಾಣ ಮಾಡಿರುವ ಬಗ್ಗೆ ಶ್ರೀ ಶಿವಲಿಂಗಯ್ಯ ಇವರ ವರದಿಯಲ್ಲಿಯೂ ಸ್ಪಷ್ಟಪಡಿಸಿರುವುದಿಲ್ಲ. ಅಲ್ಲದೆ, ಶ್ರೀ ಅಪ್ಪೇರಾವ್ ಇವರು 9 ಮೀಟರ್ ಅನ್ನು ಬೇರೆಡೆ ನಿರ್ಮಾಣ ಮಾಡಿರುವ ಬಗ್ಗೆ ಯಾವುದೇ ಛಾಯಾಚಿತ್ರ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಕಾಮಗಾರಿಯು ಪೂರ್ಣಗೊಂಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಆಪಾದಿತರು ಅವರ ವಿವರಣೆಯೊಂದಿಗೆ ಲಭ್ಯಪಡಿಸಿರುವುದಿಲ್ಲ. **ಶ್ರೀ ಡಿ.ವೆಂಕಟರಮಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ನಿಗದಿತ ಅವಧಿಯಲ್ಲಿ ವಿವರಣೆ ಸಲ್ಲಿಸಿರುವುದಿಲ್ಲ.**

ಮತ್ತೊಂದು ಕಾಮಗಾರಿಯಾದ **ಬಳ್ಳಾರಿ ತಾಲ್ಲೂಕಿನ ಶಂಕರಬಂಡೆ ಗ್ರಾಮದ ಕುರುಬರ ಓಣಿಯಲ್ಲಿ ಸುಮದಾಯ ನಿರ್ಮಾಣ ಕಾಮಗಾರಿಯನ್ನು** ಶ್ರೀ ಮಹಾಂತೇಶಗೌಡ ಹಿಂದಿನ ಸಹಾಯಕ ಇಂಜಿನಿಯರ್ ಮತ್ತು ಶ್ರೀ ತಿಮ್ಮಪ್ಪ, ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಇವರ ಉಸ್ತುವಾರಿಯಲ್ಲಿ ಅನುಷ್ಠಾನಗೊಳಿಸಿದ್ದು, ಆರೋಪವೇನೆಂದರೆ 2008-09 ನೇ ಸಾಲಿನಲ್ಲಿ ಹೈದ್ರಾಬಾದ್- ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾದ ಅನುದಾನ ರೂ.2.50 ಲಕ್ಷ ಅನುದಾನದಲ್ಲಿ ಕೈಗೊಳ್ಳಲಾದ ಬಳ್ಳಾರಿ ತಾಲ್ಲೂಕಿನ ಸೋಮಲಾಪುರ ಗ್ರಾಮದಲ್ಲಿ ಚೆಕ್ ಡ್ಯಾಂ ಕಾಮಗಾರಿಯನ್ನು ಮಂಜೂರಾದ ಅಂದಾಜಿನಂತೆ ಮಾಡಿರುವುದಿಲ್ಲ. ಸದರಿ ಕಾಮಗಾರಿಯನ್ನು ಶ್ರೀ ವಜೀರಪ್ಪ ತಂದೆ ಹನುಮಪ್ಪನವರ

ಬದುವಿಗೆ ನಿರ್ಮಾಣ ಮಾಡಲಾಗಿದ್ದು, ಮಂಜೂರಾದ ಅಂದಾಜಿನಂತೆ ಅನುಷ್ಠಾನ ಮಾಡದಿರುವುದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಸದರಿ ಆರೋಪಗಳಿಗೆ ಪ್ರತಿಯಾಗಿ ಶ್ರೀ ಮಹಾಂತೇಶಗೌಡ ಇವರು ವಿವರಣೆ ಸಲ್ಲಿಸಿ, ಶ್ರೀ ರುದ್ರಯ್ಯ ಇವರು ಕಾಮಗಾರಿ ಪರಿಶೀಲನೆಗೆ ದಿ:26.3.2010 ರಂದು ಬೇಟಿ ನೀಡಿದ ಸಂದರ್ಭದಲ್ಲಿ ಬೇಸ್ ಮೆಂಟ್ ಮಾತ್ರ ನಿರ್ಮಾಣವಾಗಿದ್ದು, ಕಟ್ಟಡದ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸಿರುವ ಅಳತೆಗಳೊಂದಿಗೆ ತಾಳೆ ನೋಡಿ ಪರಿಶೀಲನೆ ಮಾಡಿರುತ್ತಾರೆಂದು, ಅದರೆ ಅಳತೆಗಳಲ್ಲಿ ಯಾವುದೇ ಲೋಪ/ಹಣ ದುರುಪಯೋಗ ಮಾಡಿರುವ ಬಗ್ಗೆ ಅವರ ವರದಿಯಲ್ಲಿ ನಮೂದಿಸಿರುವುದಿಲ್ಲವೆಂದು ಕಟ್ಟಡದ ಕಾಮಗಾರಿಯ ನಿರ್ಮಾಣದ ಅನುಸಾರ 2 ನೇ ಬಿಲ್ ಸಹ ಪಾವತಿಸಲಾಗಿರುತ್ತದೆಯೆಂದು, ಯಾವುದೇ ಬಿಲ್‌ನ್ನು ಕಾಮಗಾರಿಯನ್ನು ನಿರ್ವಹಿಸದೇ ಪಾವತಿಸಿರುವುದಿಲ್ಲವೆಂದು, ಹಾಗೂ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲವೆಂದು ತಿಳಿಸಿ, ಅವರನ್ನು ಆರೋಪದಿಂದ ಕೈ ಬಿಡುವಂತೆ ಕೋರಿರುತ್ತಾರೆ.

ಶ್ರೀ ಮಹಾಂತೇಶಗೌಡ ಇವರು ವಿವರಣೆಯೊಂದಿಗೆ ಶ್ರೀ ರುದ್ರಯ್ಯ ಇವರ ವರದಿಯ ಪ್ರತಿಯನ್ನು ಲಗತ್ತಿಸಿದ್ದು, ಶ್ರೀ ರುದ್ರಯ್ಯ ಇವರ ಪರಿಶೀಲನಾ ವರದಿಯನ್ನು ಗಮನಿಸಲಾಗಿ, ಅಂದಾಜು ಪಟ್ಟಿಯಲ್ಲಿ ತಳಪಾಯದ ಅಳ 0.75 ಮೀ ಇದ್ದು, ನಿರ್ಮಾಣ ಸ್ಥಳವು ಮರಳು ಮಿಶ್ರಿತವಾಗಿರುವುದರಿಂದ ಅಳ 1.95 ಮೀಟರ್ ಅಳವಡಿಸಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ. ಈ ರೀತಿಯ ಬದಲಾವಣೆಗೆ ಕಾರ್ಯಪಾಲಕ ಇಂಜನಿಯರ್‌ರವರ ಮೌಖಿಕ ಆದೇಶದನ್ವಯಯ ಕೈಗೊಂಡಿರುವುದಾಗಿ ತಿಳಿಸಿದ್ದರೂ, ಕಾಮಗಾರಿಯು ಪೂರ್ಣಗೊಂಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಹಾಗಾಗಿ ಸದರಿ ಕಾಮಗಾರಿಯ ಬೇಸ್‌ಮೆಂಟ್‌ವರೆಗಿನ ನಿರ್ಮಾಣ ಮಾತ್ರವಾಗಿರುತ್ತದೆ ಎಂಬುದು ಸ್ಪಷ್ಟವಾಗಿರುತ್ತದೆ.

ಆದ್ದರಿಂದ ಮೇಲಿನ ಎರಡು ಕಾಮಗಾರಿಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಜವಬ್ದಾರಿಯನ್ನು ಹೊಂದಿದ ಅಧಿಕಾರಿಗಳು ಮಂಜೂರಾದ ಅಂದಾಜಿನಂತೆ ಕಾಮಗಾರಿಯನ್ನು ನಿರ್ವಹಿಸದೇ ಭಾಗಶ: ಕಾಮಗಾರಿಯನ್ನು ಅನುಷ್ಠಾನಗೊಳಿಸಿ ಸಂಪೂರ್ಣ ಹಣ ಪಾವತಿಸಿರುವುದು ಹಾಗೂ ಕಾಮಗಾರಿ ಅನುಷ್ಠಾನಗೊಳಿ ಸಿರುವಂತೆ ಅಳತೆ ಪುಸ್ತಕದಲ್ಲಿ ಸುಳ್ಳು ವಿವರಗಳನ್ನು ದಾಖಲಿಸಿರುವುದು ಸ್ಪಷ್ಟವಾಗಿದ್ದು ಆಪಾದಿತರು ಈ ಎರಡೂ ಕಾಮಗಾರಿಗಳ ಹಣ ದುರುಪಯೋಗಪಡಿಸಿಕೊಂಡಿರುವುದು ಹಾಗೂ ತೀವ್ರತರವಾದ ದುರ್ನಡತೆ ಎಸಗಿರುವುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ ಸದರಿ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಹಾಗೂ ದುರುಪಯೋಗವಾದ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲು ಮಾಡಲು ಸರ್ಕಾರವು ನಿರ್ಧರಿಸಿರುತ್ತದೆ.

ಅಲ್ಲದೆ ಮೇಲಿನ 4 ಜನ ಆಪಾದಿತರನ್ನು ಹೊರತುಪಡಿಸಿ ಉಳಿದ ಆಪಾದಿತರಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು. ಅದರಂತೆ ಈ ಆದೇಶ

**ಆದೇಶ ಸಂಖ್ಯೆ: ಗ್ರಾಅಪ 20 ಇಎನ್‌ಕ್ಯೂ 2015, ಬೆಂಗಳೂರು ದಿನಾಂಕ:08.09.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರವು ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ದದ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ಅವರ ಹೆಸರನ ಮುಂದೆ ನಮೂದಿಸಿರುವಂತೆ ದಂಡನೆಯನ್ನು ವಿಧಿಸಿ, ಆದೇಶಿಸಿದೆ.

| ಕ್ರಸಂ. | ಅಧಿಕಾರಿಯ ಹೆಸರು | ವಿಧಿಸಲಾದ ದಂಡನೆಯ ಸ್ವರೂಪ |
|---|---|---|
| 1 | ಸಿ. ತಿಮ್ಮಪ್ಪ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ ವಿಭಾಗ. ಬಳ್ಳಾರಿ. | ಸದರಿಯವರನ್ನು ಲೋಕೋಪಯೋಗಿ ಇಲಾಖೆಯ ಆದೇಶ ಸಂ: ಲೋಇ 294 ಸೇಇವಿ 2015 ದಿನಾಂಕ 25.4.2017ರಲ್ಲಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳು, 1957 ನಿಯಮ 8(viii)ರಂತೆ ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಿರುವುದರಿಂದ ಸದರಿ ಅಧಿಕಾರಿಯಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.50,000/- (ಐವತ್ತು ಸಾವಿರ ರೂ.ಗಳು ಮಾತ್ರ) ಗಳನ್ನು ವಸೂಲು ಮಾಡಲು ಕೂಡಲೇ ಕ್ರಮ ಕೈಗೊಳ್ಳುವಂತೆ ಕಾರ್ಯದರ್ಶಿ, ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲ್ಬರ್ಗಾ ಇವರಿಗೆ ಸೂಚಿಸಿದೆ. |
| 2 | ಅಪ್ಪೇರಾವ್, ಕಿರಿಯ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ | 1. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957 ರ ನಿಯಮ 8 (iv) ರನ್ವಯ ರೂ.93,750/-ಗಳನ್ನು ಸದರಿಯುವರ ವೇತನದಿಂದ ವಸೂಲಿ ಮಾಡುವುದು.<br>2. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957 ರ ನಿಯಮ 8 (iii) ರನ್ವಯ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ ಎರಡು ವರ್ಷಗಳ ಅವಧಿಗೆ ತಡೆಯಿಡಿಯುವ ದಂಡನೆ ವಿಧಿಸುವುದು. |
| 3 | ಶ್ರೀ ಹೆಚ್.ಮಹಾಂತೇಶಗೌಡ. ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಸಂಡೂರು | 1. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 8 (iv) ರನ್ವಯ ರೂ.75,000/- ಗಳನ್ನು ಸದರಿಯುವರ ವೇತನದಿಂದ ವಸೂಲಿ ಮಾಡುವುದು.<br>2. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 8 (iii) ರನ್ವಯ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ ಎರಡು ವರ್ಷದ ಅವಧಿಗೆ ತಡೆಯಿಡಿಯುವ ದಂಡನೆ ವಿಧಿಸುವುದು. |
| 4 | ಶ್ರೀ ಡಿ.ವೆಂಕಟರಮಣ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಬಳ್ಳಾರಿ. | 1. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 8 (iv) ರನ್ವಯ ರೂ.93,750/- ಗಳನ್ನು ಸದರಿಯುವರ ವೇತನದಿಂದ ವಸೂಲಿ ಮಾಡುವುದು.<br>2. ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 8 (iii) ರನ್ವಯ ಎರಡು ವಾರ್ಷಿಕ ವೇತನ ಬಡ್ತಿಗಳನ್ನು |

| | | |
|---|---|---|
| | | ಸಂಚಿತ ಪರಿಣಾಮ ರಹಿತವಾಗಿ ಎರಡು ವರ್ಷದ ಅವಧಿಗೆ ತಡೆಯಿಡಿಯುವ ದಂಡನೆ ವಿಧಿಸುವುದು |

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 07/09/2017
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು, (ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ/ ಜಲ ಸಂಪನ್ಮೂಲ ಇಲಾಖೆ/ ಸಣ್ಣ ನೀರಾವರಿ ಇಲಾಖೆ.
3. ಕಾರ್ಯದರ್ಶಿ, ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಅಭಿವೃದ್ಧಿ ಭವನ, ಐವಾನ್-ಶಾಹಿ, ಕಲಬುರಗಿ-585102
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
7. ಮುಖ್ಯ ಕಾರ್ಯಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣಾ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
9. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಮುಖಾಂತರ)
10. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
11. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) /ಜಂಟಿ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು /
12. ಶಾಖಾ ರಕ್ಷಾ ಕಡತ/ ಕಂಪ್ಯೂಟರ್ ಸೆಲ್ ಇವರಿಗೆ ವೆಬ್ ಸೈಟ್‌ನಲ್ಲಿ ಪ್ರಕಟಿಸಲು/ ಹೆಚ್ಚುವರಿ ಪ್ರತಿ.